ಡಿಡಿ / ಪೋಸ್ಟಲ್ ಆರ್ಡರ್/ ಮನಿಯಾರ್ಡರ್ ಮುಖಾಂತರ ಅರ್ಜಿ ಶುಲ್ಕ ಸಂದಾಯ ಮಾಡಿದಲ್ಲಿ ಅಂತಹ ಶುಲ್ಕವನ್ನು ಸ್ವೀಕರಿಸದೆ ತಿರಸ್ಕರಿಸಲಾಗುವುದು ಮತ್ತು ಅಂತಹ ಅಭ್ಯರ್ಥಿಯ ಅರ್ಜಿಯನ್ನು ಶುಲ್ಕ ಸಂದಾಯ ಮಾಡದ ಅರ್ಜಿ ಎಂದು ಪರಿಗಣಿಸಲಾಗುವುದು.

## 5. ನಿಗಧಿತ ನಮೂನೆಯಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆಗೆ ಮತ್ತು ಅರ್ಜಿ ಶುಲ್ಕ ಪಾವತಿಗೆ ನಿಗಧಿಪಡಿಸಿರುವ ಕಾಲಾವಧಿ :

| | |
|---|---|
| ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಪ್ರಾರಂಭಿಕ ದಿನಾಂಕ | 02-03-2023 |
| ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ | 16-03-2023 |
| ಅರ್ಜಿ ಶುಲ್ಕ ಪಾವತಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ | 16-03-2023 |

## 6. ಆಯ್ಕೆ ವಿಧಾನ:

ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 18 (ಸಿ), (ಇ), (ಎಫ್) ಮತ್ತು (ಜಿ) ರಲ್ಲಿ ತಿಳಿಸಿರುವ ವಿಧಿ ವಿಧಾನಗಳನ್ನು ಮತ್ತು ಇಲಾಖೆಯಿಂದ ನೀಡಿರುವ ಮಾರ್ಗಸೂಚಿಗಳನ್ನು ಪಾಲನೆ ಮಾಡಿ ಅರ್ಹ ಅಭ್ಯರ್ಥಿಗಳನ್ನು ನೇರ ನೇಮಕಾತಿ ಮೂಲಕ ಆಯ್ಕೆ ಮಾಡಲಾಗುವುದು.

**(1)ಲೆಕ್ಕಿಗರ ಹುದ್ದೆ:** ಈ ಹುದ್ದೆಗೆ ಅರ್ಹ ಅಭ್ಯರ್ಥಿಗಳನ್ನು ಈ ಕೆಳಗಿನ ವಿಧಾನದನ್ವಯ ಆಯ್ಕೆ ಮಾಡಲಾಗುವುದು.

- ಲೆಕ್ಕಿಗರ ಹುದ್ದೆಗೆ ನಿಗಧಿಪಡಿಸಿರುವ ಶೈಕ್ಷಣಿಕ ವಿದ್ಯಾರ್ಹತೆಯಲ್ಲಿ ಉತ್ತೀರ್ಣರಾಗಿದ್ದಲ್ಲಿ ಮತ್ತು ಗರಿಷ್ಠ ವಯೋಮಿತಿ ಮೀರದಿದ್ದಲ್ಲಿ ಅಂತಹ ಎಲ್ಲಾ ಅರ್ಹ ಅಭ್ಯರ್ಥಿಗಳನ್ನು ಲಿಖಿತ ಪರೀಕ್ಷೆಗೆ ಕರೆಯಲಾಗುವುದು
- ಲಿಖಿತ ಪರೀಕ್ಷೆಯು ಈ ಕೆಳಗಿನ ವಿಷಯಗಳನ್ನೊಳಗೊಂಡ 200 ಅಂಕಗಳ ಒಂದು ಪ್ರಶ್ನೆ ಪತ್ರಿಕೆಯನ್ನು ಹೊಂದಿರುತ್ತದೆ.

| | |
|---|---|
| ಕನ್ನಡ ಭಾಷೆ | 50 ಅಂಕಗಳು |
| ಸಾಮಾನ್ಯ ಆಂಗ್ಲ ಭಾಷೆ | 25 ಅಂಕಗಳು |
| ಸಾಮಾನ್ಯ ಜ್ಞಾನ | 25 ಅಂಕಗಳು |
| ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳು | 50 ಅಂಕಗಳು |
| ಭಾರತ ಸಂವಿಧಾನಕ್ಕೆ ಸಂಬಂಧಿಸಿದ ವಿಷಯಗಳು | 25 ಅಂಕಗಳು |
| ಸಮಾಜದ ಯುಕ್ತವಾದ ಚಟುವಟಿಕೆಗಳು ಮತ್ತು ವಸ್ತುನಿಷ್ಠ ವಿಷಯ ವಸ್ತುಗಳು | 25 ಅಂಕಗಳು |
| ಒಟ್ಟು | 200 ಅಂಕಗಳು |

The Kolar & Chickballapura D.C.C. Bank Ltd. Reg.No. ARK-492 Dt: 24-12-1954 Kolar.

- ಲಿಖಿತ ಪರೀಕ್ಷೆಯನ್ನು ಬ್ಯಾಂಕಿನ ಆಡಳಿತ ಮಂಡಲಿಯಿಂದ ರಚಿಸಲ್ಪಟ್ಟ ನೇಮಕಾತಿ ಸಮಿತಿಯಿಂದ ಆಯ್ಕೆ ಮಾಡಲಿರುವ ಬಾಹ್ಯಮೂಲ ಸಂಸ್ಥೆಯಿಂದ ನಡೆಸಲಾಗುವುದು ಮತ್ತು ಉತ್ತರ ಪತ್ರಿಕೆಯ ಮೌಲ್ಯ ಮಾಪನವನ್ನು ಲಿಖಿತ ಪರೀಕ್ಷೆ ನಡೆಸಿದ ಬಾಹ್ಯ ಮೂಲ ಸಂಸ್ಥೆಯಿಂದಲೇ ಮಾಡಿಸಲಾಗುವುದು.
- ಮೌಖಿಕ ಸಂದರ್ಶನವನ್ನು ಬ್ಯಾಂಕಿನ ಆಡಳಿತ ಮಂಡಲಿಯಿಂದ ರಚಿಸಲ್ಪಟ್ಟ ನೇಮಕಾತಿ ಆಯ್ಕೆ ಸಮಿತಿಯಿಂದ ನಡೆಸಲಾಗುವುದು.
- ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಶೇಕಡ 85 ಕ್ಕೆ ನಿಗಧಿಪಡಿಸಿ ಪ್ರಾಪ್ತವಾಗುವ ಅಂಕಗಳ ಆಧಾರದ ಮೇಲೆ ಜ್ಯೇಷ್ಠತಾ ಪಟ್ಟಿಯನ್ನು ತಯಾರಿಸಿ ಅರ್ಹ ಅಭ್ಯರ್ಥಿಗಳನ್ನು 1:5 ರ ಅನುಪಾತದಲ್ಲಿ ಮೌಖಿಕ ಸಂದರ್ಶನಕ್ಕೆ ಕರೆಯಲಾಗುವುದು. **ಸಂದರ್ಶನಕ್ಕೆ 15 ಅಂಕಗಳನ್ನು ನಿಗದಿಪಡಿಸಲಾಗಿರುತ್ತದೆ.**
- ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಜೊತೆಗೆ ಸಂದರ್ಶನದಲ್ಲಿ ಗಳಿಸಿದ ಅಂಕಗಳನ್ನು ಕೂಡಿಸಿ ಅರ್ಹತಾ ಪಟ್ಟಿ ತಯಾರಿಸಿ ಕರ್ನಾಟಕ ಸರ್ಕಾರದ ಮೀಸಲಾತಿ ನಿಯಮಗಳನ್ನು ಅನುಸರಿಸಿ ಆಯ್ಕೆ ಪಟ್ಟಿ ಸಿದ್ಧಪಡಿಸಿ ಮಾನ್ಯ ನಿಬಂಧಕರ ಸುತ್ತೋಲೆ ಸಂಖ್ಯೆ: ಆರ್.ಸಿ.ಎಸ್ / ಆರ್.ಎಸ್.ಆರ್ / ಎಕ್ಸ್ ಎಂಸಿ / 41 / 2020-21 ದಿನಾಂಕ 16.09.2020 ನ್ನು ಪಾಲನೆ ಮಾಡುವ ಮೂಲಕ ನೇಮಕಾತಿ ಮಾಡಿಕೊಳ್ಳಲಾಗುವುದು.

**(2) <u>ಹಿರಿಯ ಸಹಾಯಕರ ಹುದ್ದೆ:</u>** ಈ ಹುದ್ದೆಗೆ ಅರ್ಹ ಅಭ್ಯರ್ಥಿಗಳನ್ನು ಈ ಕೆಳಗಿನ ವಿಧಾನದನ್ವಯ ಆಯ್ಕೆ ಮಾಡಲಾಗುವುದು.

- ಹಿರಿಯ ಸಹಾಯಕರ ಹುದ್ದೆಗೆ ನಿಗಧಿಪಡಿಸಿರುವ ಶೈಕ್ಷಣಿಕ ವಿದ್ಯಾರ್ಹತೆಯಲ್ಲಿ ಉತ್ತೀರ್ಣರಾಗಿದ್ದಲ್ಲಿ ಮತ್ತು ಗರಿಷ್ಠ ವಯೋಮಿತಿ ಮೀರದಿದ್ದಲ್ಲಿ ಅಂತಹ ಎಲ್ಲಾ ಅರ್ಹ ಅಭ್ಯರ್ಥಿಗಳನ್ನು ಲಿಖಿತ ಪರೀಕ್ಷೆಗೆ ಕರೆಯಲಾಗುವುದು
- ಲಿಖಿತ ಪರೀಕ್ಷೆಯು ಈ ಕೆಳಗಿನ ವಿಷಯಗಳನ್ನೊಳಗೊಂಡ 200 ಅಂಕಗಳ ಒಂದು ಪ್ರಶ್ನೆ ಪತ್ರಿಕೆಯನ್ನು ಹೊಂದಿರುತ್ತದೆ.

| | |
|---|---|
| ಕನ್ನಡ ಭಾಷೆ | 50 ಅಂಕಗಳು |
| ಸಾಮಾನ್ಯ ಆಂಗ್ಲ ಭಾಷೆ | 25 ಅಂಕಗಳು |
| ಸಾಮಾನ್ಯ ಜ್ಞಾನ | 25 ಅಂಕಗಳು |
| ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳು | 50 ಅಂಕಗಳು |
| ಭಾರತ ಸಂವಿಧಾನಕ್ಕೆ ಸಂಬಂಧಿಸಿದ ವಿಷಯಗಳು | 25 ಅಂಕಗಳು |
| ಸಮಾಜದ ಯುಕ್ತವಾದ ಚಟುವಟಿಕೆಗಳು ಮತ್ತು ವಸ್ತುನಿಷ್ಠ ವಿಷಯ ವಸ್ತುಗಳು | 25 ಅಂಕಗಳು |
| ಒಟ್ಟು | 200 ಅಂಕಗಳು |

- ಲಿಖಿತ ಪರೀಕ್ಷೆಯನ್ನು ಬ್ಯಾಂಕಿನ ಆಡಳಿತ ಮಂಡಲಿಯಿಂದ ರಚಿಸಲ್ಪಟ್ಟ ನೇಮಕಾತಿ ಸಮಿತಿಯಿಂದ ಆಯ್ಕೆ ಮಾಡಲಿರುವ ಬಾಹ್ಯಮೂಲ ಸಂಸ್ಥೆಯಿಂದ ನಡೆಸಲಾಗುವುದು ಮತ್ತು ಉತ್ತರ ಪತ್ರಿಕೆಯ ಮೌಲ್ಯ ಮಾಪನವನ್ನು ಲಿಖಿತ ಪರೀಕ್ಷೆ ನಡೆಸಿದ ಬಾಹ್ಯ ಮೂಲ ಸಂಸ್ಥೆಯಿಂದಲೇ ಮಾಡಿಸಲಾಗುವುದು.

The Kolar & Chickballapura D.C.C. Bank ltd. Reg.No. ARK-492 Dt:-24-12-1954 Kolar.

- ಮೌಖಿಕ ಸಂದರ್ಶನವನ್ನು ಬ್ಯಾಂಕಿನ ಆಡಳಿತ ಮಂಡಲಿಯಿಂದ ರಚಿಸಲ್ಪಟ್ಟ ನೇಮಕಾತಿ ಆಯ್ಕೆ ಸಮಿತಿಯಿಂದ ನಡೆಸಲಾಗುವುದು.
- ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಶೇಕಡ 85 ಕ್ಕೆ ನಿಗಧಿಪಡಿಸಿ ಪ್ರಾಪ್ತವಾಗುವ ಅಂಕಗಳ ಆಧಾರದ ಮೇಲೆ ಜ್ಯೇಷ್ಠತಾ ಪಟ್ಟಿಯನ್ನು ತಯಾರಿಸಿ ಅರ್ಹ ಅಭ್ಯರ್ಥಿಗಳನ್ನು 1:5 ರ ಅನುಪಾತದಲ್ಲಿ ಮೌಖಿಕ ಸಂದರ್ಶನಕ್ಕೆ ಕರೆಯಲಾಗುವುದು. **ಸಂದರ್ಶನಕ್ಕೆ 15 ಅಂಕಗಳನ್ನು ನಿಗದಿಪಡಿಸಲಾಗಿರುತ್ತದೆ.**
- ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಜೊತೆಗೆ ಸಂದರ್ಶನದಲ್ಲಿ ಗಳಿಸಿದ ಅಂಕಗಳನ್ನು ಕೂಡಿಸಿ ಅರ್ಹತಾ ಪಟ್ಟಿ ತಯಾರಿಸಿ ಕರ್ನಾಟಕ ಸರ್ಕಾರದ ಮೀಸಲಾತಿ ನಿಯಮಗಳನ್ನು ಅನುಸರಿಸಿ ಆಯ್ಕೆ ಪಟ್ಟಿ ಸಿದ್ಧಪಡಿಸಿ ಮಾನ್ಯ ನಿಬಂಧಕರ ಸುತ್ತೋಲೆ ಸಂಖ್ಯೆ: ಆರ್.ಸಿ.ಎಸ್ / ಆರ್.ಎಸ್.ಆರ್ / ಎಕ್ಸ್ ಎಂಸಿ / 41 / 2020–21 ದಿನಾಂಕ 16.09.2020 ನ್ನು ಪಾಲನೆ ಮಾಡುವ ಮೂಲಕ ನೇಮಕಾತಿ ಮಾಡಿಕೊಳ್ಳಲಾಗುವುದು.

<u>**(3)ವಾಹನ ಚಾಲಕರ ಹುದ್ದೆ**</u>: ಈ ಹುದ್ದೆಗೆ ಅರ್ಹ ಅಭ್ಯರ್ಥಿಗಳನ್ನು ಈ ಕೆಳಗಿನ ವಿಧಾನದನ್ವಯ ಆಯ್ಕೆ ಮಾಡಲಾಗುವುದು.

- ಬ್ಯಾಂಕಿಗೆ ಬರುವ ಒಟ್ಟು ಅರ್ಜಿಗಳನ್ನು ಪರಿಶೀಲಿಸಿ, ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪಡೆದ ಅಂಕಗಳ ಜೇಷ್ಠತಾ ಆಧಾರದ ಮೇಲೆ ಒಟ್ಟು ಖಾಲಿ ಹುದ್ದೆಗಳ ಸಂಖ್ಯೆಗೆ ಅರ್ಹತಾ ಪಟ್ಟಿಯನ್ನು ತಯಾರಿಸಿ **1 : 5** ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ವಾಹನ ಚಾಲನಾ ಪರೀಕ್ಷೆಗೆ ಕರೆಯಲಾಗುವುದು.
- ಸಂದರ್ಶನಕ್ಕೆ ನಿಗದಿಪಡಿಸಲಾದ ಅಂಕಗಳು **15** ಮತ್ತು ವಾಹನ ಚಾಲನೆಯ ಪ್ರವೀಣತೆಯ ಪರೀಕ್ಷೆಗೆ ನಿಗದಿಪಡಿಸಲಾದ ಅಂಕಗಳು 30.
- ವಾಹನ ಚಾಲನಾ ಪ್ರವೀಣತಾ ಪರೀಕ್ಷೆಯನ್ನು ಪ್ರಾದೇಶಿಕ ಸಾರಿಗೆ ಇಲಾಖೆ ವತಿಯಿಂದ ನಡೆಸಲಾಗುವುದು.
- ಮೌಖಿಕ ಸಂದರ್ಶನವನ್ನು ಬ್ಯಾಂಕಿನ ಆಡಳಿತ ಮಂಡಲಿಯಿಂದ ರಚಿಸಲ್ಪಟ್ಟ ನೇಮಕಾತಿ ಆಯ್ಕೆ ಸಮಿತಿಯಿಂದ ನಡೆಸಲಾಗುವುದು.
- ವಾಹನ ಚಾಲನೆಯ ಪ್ರವೀಣತೆಯ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಶೇಕಡ 85 ಕ್ಕೆ ಇಳಿಸಿ ಜೊತೆಗೆ ಮೌಖಿಕ ಸಂದರ್ಶನದಲ್ಲಿ ಗಳಿಸಿದ ಅಂಕಗಳನ್ನು ಕೂಡಿಸಿ ಅರ್ಹತಾ ಪಟ್ಟಿ ತಯಾರಿಸಿ ಕರ್ನಾಟಕ ಸರ್ಕಾರದ ಮೀಸಲಾತಿ ನಿಯಮಗಳನ್ನು ಅನುಸರಿಸಿ ಆಯ್ಕೆ ಪಟ್ಟಿ ಸಿದ್ಧಪಡಿಸಿ ಮಾನ್ಯ ನಿಬಂಧಕರ ಸುತ್ತೋಲೆ ಸಂಖ್ಯೆ: ಆರ್.ಸಿ.ಎಸ್ / ಆರ್.ಎಸ್.ಆರ್ / ಎಕ್ಸ್ ಎಂಸಿ / 41 / 2020–21 ದಿನಾಂಕ 16.09.2020 ನ್ನು ಪಾಲನೆ ಮಾಡುವ ಮೂಲಕ ನೇಮಕಾತಿ ಮಾಡಿಕೊಳ್ಳಲಾಗುವುದು.

The Kolar & Chickballapura D.C.C. Bank ltd. Reg.No. ARK-492 Dt:-24-12-1954 Kolar.